# ಶಿಕ್ಷಣದಲ್ಲಿ ಕಲಿಕಾನಿರ್ಧರಣೆ ಮತ್ತು ಸಹಾಯ ಹಸ್ತ

ಜಿ. ಶಂಕರ್



ಶಿಕ್ಷಣವನ್ನೂ ಒಂದು ವ್ಯಾಪಾರದ ಸರಕು ಮಾಡಿರುವ ಕಾರಣ ಶಿಕ್ಷಣದಲ್ಲೂ ಉಳ್ಳವರ ಮತ್ತು ಬಡವರ ಎರಡು ಪ್ರತ್ಯೇಕ ಜಗತ್ತು ಸೃಷ್ಟಿಯಾಗಿದೆ. ಸರ್ಕಾರಿ ಶಾಲೆಗಳಲ್ಲಿನ ಶಿಕ್ಷಣ ಇಂದಿಗೂ ಕಳಪೆ ಮಟ್ಟದಲ್ಲಿರುವುದಷ್ಟೇ ಅಲ್ಲ, ಹೊಸದಾಗಿ ಜಾರಿಗೆ ತಂದ ಕಲಿಕಾನಿರ್ಧರಣೆ ಆಧಾರಿತ ಪಠ್ಯಪುಸ್ತಕಗಳು ಪ್ರಸ್ತುತ ಶಿಕ್ಷಣ ವ್ಯವಸ್ಥೆಗೆ ಸರಿಹೊಂದುತ್ತಿಲ್ಲ. ಈಗ ಉಳ್ಳವರ ಜಗತ್ತಿನ ಶಿಕ್ಷಣ ವ್ಯವಸ್ಥೆಯಲ್ಲಿ ಮಾಹಿತಿಯ ಮಹಾಪೂರವೇ ಇದೆ. ಇಲ್ಲಿ ಕಲಿಯುವುದಕ್ಕೆ ವಿಪುಲ ಅವಕಾಶಗಳಿವೆ. ಹಲವು ತಂದೆತಾಯಿಯರು ಮತ್ತು ಶಿಕ್ಷಕರು ಮಕ್ಕಳಿಗೆ ಚಿಕ್ಕಂದಿನಲ್ಲೇ ಸುಧಾರಿತ ಪರಿಕಲ್ಪನೆಗಳನ್ನು ಪರಿಚಯಿಸುತ್ತಾರೆ. ಕಲಿಕೆಯ ಸಹಜ ಆಕಾಂಕ್ಷೆಯ ವಿರುದ್ಧವಾಗಿ ಶೀಘ್ರವಾಗಿ ಕಲಿಯುವಂತೆ ಒತ್ತಡ ಹೇರುವುದರಿಂದ ಮಕ್ಕಳಲ್ಲಿ ಆತಂಕ, ಖಿನ್ನತೆ ಮತ್ತು ದುಃಖ ಕಾಣಿಸಿಕೊಳ್ಳುತ್ತದೆ. ಅಷ್ಟೇ ಅಲ್ಲ, ಅವರು ಕಲಿಕೆಯ ಖುಷಿಯನ್ನೇ ಕಳೆದುಕೊಳ್ಳುತ್ತಾರೆ. ಉಳ್ಳವರಿಗಾಗಿನ ಶಾಲೆಗಳು ಗರಿಷ್ಠ ಸಾಮರ್ಥ್ಯವನ್ನು ಬೇಡುವ ಪಠ್ಯಗಳನ್ನು ಅಳವಡಿಸಿಕೊಂಡಿರುತ್ತವೆ. ಮಕ್ಕಳು ಬೌದ್ಧಿಕ ಟ್ರೆಡ್‌ಮಿಲ್‌ನಲ್ಲಿ ಎಲ್ಲೂ ಮುಗ್ಗರಿಸದೇ ಓಡುತ್ತಿರಬೇಕು ಎಂದೂ ತಂದೆತಾಯಿಯರು ಭಾವಿಸುತ್ತಾರೆ.

ಮಕ್ಕಳ ಕಲಿಕಾ ಸಾಧನೆಯನ್ನು ಅಳೆಯುವ ವ್ಯವಸ್ಥೆಯು ಆಯಾ ಶಾಲೆ ಮತ್ತು ಶಿಕ್ಷಕರು ಮಕ್ಕಳ ಸಾಧನೆಯ ಮತ್ತು ಅಭಿವೃದ್ಧಿಯ ಪ್ರಕ್ರಿಯೆಯನ್ನು ಸುಸ್ಥಿರವಾಗಿ ಕಾಪಾಡಿಕೊಳ್ಳುವಂತೆ ಅವರಿಗೆ ಸ್ಫೂರ್ತಿ ಮತ್ತು ಪ್ರೇರಣೆಯನ್ನು ನೀಡುವ ಗುರಿಯನ್ನು ಹೊಂದಿರುತ್ತದೆ. ಈ ವ್ಯವಸ್ಥೆಯಲ್ಲಿ ಶಾಲೆಯ ವಾತಾವರಣ ಹಾಗೂ ಅಲ್ಲಿ ನಡೆಯುವ ಪ್ರತಿಯೊಂದು ಶೈಕ್ಷಣಿಕ ಪ್ರಕ್ರಿಯೆಯೂ ಮಕ್ಕಳು ತಮಗೆ ಅಗತ್ಯವಾದ ಸಾಮರ್ಥ್ಯವನ್ನು ತಮ್ಮ ದಿನನಿತ್ಯದ ಚಟುವಟಿಕೆಗಳಿಂದಲೇ ಪಡೆದುಕೊಳ್ಳುವಂತೆ ಮಾಡುವ ಸಮಗ್ರ ಉದ್ದೇಶವನ್ನು ಹೊಂದಿರುತ್ತದೆ.

ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ "ಮೌಲ್ಯಮಾಪನವು" ಪರೀಕ್ಷೆ, ಒತ್ತಡ ಮತ್ತು ಭಯದ ನೆರಳಲ್ಲಿದೆ. ಆಳವಾಗಿ ಬೇರೂರಿರುವ ಪರೀಕ್ಷಾ ಪದ್ಧತಿಯ ವಿರುದ್ಧ ಹೋರಾಡದೇ ಇದ್ದರೆ ಹೊಸ ಪಠ್ಯ ವ್ಯವಸ್ಥೆಯು ವಿಫಲವಾಗುತ್ತವೆ. ಈ ಆಳವಾಗಿ ಬೇರೂರಿರುವ ವ್ಯವಸ್ಥೆಯು ಸಂತಸದ ಕಲಿಕೆಯ ವಾತಾವರಣದಲ್ಲಿ ಜ್ಞಾನವು ಸ್ವಾಭಾವಿಕವಾಗಿ ಹರಿಯುವುದನ್ನು ತಡೆಯುತ್ತದೆ. ಶಿಕ್ಷಣದ ಈ ತಡೆಗೋಡೆಗಳನ್ನು ದಾಟಲು ಸೂಕ್ತ ಮತ್ತು ಪ್ರಸ್ತುತ ಸ್ಥಿತಿಯ ಮಾಹಿತಿಯು ಕೆಳಗಿನ ಅಂಶಗಳನ್ನು ಗುರುತಿಸಬೇಕಾದ ಅಗತ್ಯವಿದೆ:

- ಪ್ರತಿಯೊಬ್ಬ ವಿದ್ಯಾರ್ಥಿಯ ವರ್ತನೆ ಮತ್ತು ಶೈಕ್ಷಣಿಕ ಅಗತ್ಯತೆಗಳನ್ನು ಗುರುತಿಸುವುದು.
- ಸಮಸ್ಯೆ ಪರಿಹಾರ ಪ್ರಕ್ರಿಯೆಗಳ ಮಾಹಿತಿ ನೀಡುವುದು
- ವಿದ್ಯಾರ್ಥಿಯ ಅಗತ್ಯವನ್ನು ಪೂರೈಸುವಂತೆ ಬೋಧನೆಯನ್ನು ವಿನ್ಯಾಸಗೊಳಿಸಿ ಮಾರ್ಪಡಿಸುವುದು.
- ವ್ಯವಸ್ಥೆಯ ವಿವಿಧ ಸ್ತರಗಳಲ್ಲಿ ಪಾಠ ಬೋಧನೆಯ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡುವುದು (ಉದಾ. ತರಗತಿ, ಶಾಲೆ, ಜಿಲ್ಲೆ)

ಸಂಪನ್ಮೂಲಗಳು ಬರುಬರುತ್ತಾ ತೀರ ಕಡಿಮೆ ಪ್ರಮಾಣದಲ್ಲಿ ದೊರೆಯುತ್ತಿವೆಯಾದರೂ ಅವು ಸುಗಮವಾಗಿ ದೊರೆಯುವಂತೆ ಮಾಡುವ ದಕ್ಷ ವ್ಯವಸ್ಥೆಯು ಬಹಳ ಮುಖ್ಯ. ಆದ್ದರಿಂದ ಈಗ ಶಾಲಾ ಕಲಿಕಾ ನಿರ್ಧರಣೆಗಳು ವಿವಿಧ ಸ್ತರಗಳ ಕಲಿಕಾನಿರ್ಧರಣೆಯನ್ನು ಬಳಸುತ್ತಿವೆ. ಹೆಚ್ಚಿನ ಅವಶ್ಯಕತೆ ಕಂಡುಬಂದಾಗಲೆಲ್ಲಾ ಇದನ್ನು ಇನ್ನೂ ಪದೆ ಪದೇ ಮತ್ತು ತೀವ್ರವಾಗಿ ಮಾಡಲಾಗುತ್ತದೆ. ಯಾವ ವಿದ್ಯಾರ್ಥಿಗಳು ಬಹುಮುಖ್ಯ ಕೌಶಲ್ಯಗಳಲ್ಲಿ ಹಿಂದೆ ಬಿದ್ದಿದ್ದಾರೆ ಅಥವಾ ಯಾವ ವಿದ್ಯಾರ್ಥಿಗಳು ಕಲಿಕೆಯ ವೇಗವನ್ನು ವರ್ಧಿಸಿಕೊಳ್ಳಬೇಕಿದೆ ಎಂಬುದನ್ನು ಸಕಾಲದಲ್ಲಿ ದೊರೆತ ಹಾಗೂ ವಿಶ್ವಾಸಯುತ ಕಲಿಕಾ ನಿರ್ಧರಣೆಯು ಸೂಚಿಸುತ್ತದೆ. ಇದೇ ವೇಳೆ ಶಿಕ್ಷಕರಿಗೂ ಕಲಿಕಾ ಅಗತ್ಯಗಳಿಗೆ ಸರಿಹೊಂದುವ ಬೋಧನಾ ವಿನ್ಯಾಸಗಳನ್ನು ರೂಪಿಸಲು ಈ ಕಲಿಕಾ ನಿರ್ಧರಣೆಯು ಸಹಾಯಕವಾಗುತ್ತದೆ. ಕಲಿಕೆ ಮತ್ತು ವರ್ತನೆಯ ಬಗ್ಗೆ ವಿದ್ಯಾರ್ಥಿಗಳಲ್ಲಿನ ಪ್ರಗತಿಯನ್ನು ನಿರಂತರವಾಗಿ ನಿರ್ಧರಣೆ ಮಾಡುವುದರಿಂದ ಯಾವ ವಿದ್ಯಾರ್ಥಿಗಳಿಗೆ ಹೆಚ್ಚಿನ ನೆರವು ಅಗತ್ಯವಿದೆ ಮತ್ತು ಯಾವ ವಿದ್ಯಾರ್ಥಿಗಳು ಹೆಚ್ಚಿನ ನೆರವಿನ ಅಗತ್ಯವಿಲ್ಲದೇ ಉತ್ತಮ ಪ್ರಗತಿ ಸಾಧಿಸಬಲ್ಲರು ಹಾಗೂ ಯಾವ ವಿದ್ಯಾರ್ಥಿಗಳ ಕಲಿಕೆಯ ವೇಗವರ್ಧನೆ ಮಾಡಬೇಕಿದೆ ಎಂಬುದನ್ನು ಶಿಕ್ಷಕರು ಅರಿಯಬಹುದು.

**ಪರಿಣಾಮಕಾರಿ ಕಲಿಕಾ ನಿರ್ಧರಣೆ ಯೋಜನೆಯು ನಾಲ್ಕು ಮುಖ್ಯ ಉದ್ದೇಶಗಳನ್ನು ಒಳಗೊಂಡಿದೆ:**

1. ಶೈಕ್ಷಣಿಕ ವರ್ಷದ ಆರಂಭದಲ್ಲೇ ಕಲಿಕೆಯಲ್ಲಿ ಕಷ್ಟಪಡುತ್ತಿರುವ, ಕಡಿಮೆ ಸಾಧನೆ ತೋರುತ್ತಿರುವ ವಿದ್ಯಾರ್ಥಿಗಳನ್ನು, ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಶ್ರೇಣಿ ಹಂತದಲ್ಲಿ ಉತ್ತಮ ಸಾಧನೆ ತೋರುವುದಕ್ಕೆ ಯಾರಿಗೆ ಹೆಚ್ಚುವರಿ ಬೋಧನೆಯ ಅಗತ್ಯವಿದೆ ಅಥವಾ ತೀವ್ರ ಪ್ರಯತ್ನಗಳ ಅಗತ್ಯವಿದೆ ಎಂಬುದನ್ನು ಹಾಗೆಯೇ ಈಗಾಗಲೇ ಇರುವ ಗುರಿಯನ್ನು ತಲುಪಿರುವ ಹಾಗೂ ಹೆಚ್ಚಿನ ಗುರಿಯನ್ನು ನೀಡಬೇಕಾಗಿರುವ, ವಿದ್ಯಾರ್ಥಿಗಳನ್ನು ಗುರುತಿಸುವುದು.
2. ಹಿನ್ನಡೆ ತೋರಿದ್ದ ವಿದ್ಯಾರ್ಥಿಗಳು ಬಹುಮುಖ್ಯ ಕೌಶಲ್ಯಗಳಲ್ಲಿ ಸೂಕ್ತ ಪ್ರಗತಿಯನ್ನು ಸಾಧಿಸುತ್ತಿದ್ದಾರೆಯೇ ಮತ್ತು ಯಾರಾದರೂ ವಿದ್ಯಾರ್ಥಿಗಳು ಹಿಂದೆ ಬೀಳುತ್ತಿದ್ದಾರೆಯೇ ವಿದ್ಯಾರ್ಥಿಗಳು ಹಾಗೂ ಯಾರಿಗಾದರೂ ಹೆಚ್ಚಿನ ಗುರಿಯನ್ನು ನೀಡಬೇಕಾಗಿದೆಯೇ ಎಂದು ವಿದ್ಯಾರ್ಥಿಗಳ ಮೇಲ್ವಿಚಾರಣೆಯನ್ನು ಇಡೀ ವರ್ಷ ನಡೆಸಬೇಕು.
3. ಒಬ್ಬೊಬ್ಬ ವಿದ್ಯಾರ್ಥಿಯ ಪ್ರಮುಖ ಅಗತ್ಯಗಳನ್ನು ಪೂರೈಸಲು ಬೋಧನಾ ಯೋಜನೆಯ ಮಾಹಿತಿಯನ್ನು ನೀಡಬೇಕು.
4. ಒದಗಿಸಲಾಗಿರುವ ಬೋಧನೆ ಅಥವಾ ಸಹಾಯಹಸ್ತ ವಿದ್ಯಾರ್ಥಿಯು ವರ್ಷಾಂತ್ಯದಲ್ಲಿ ಮಾನಕ ಗ್ರೇಡ್ ಮಟ್ಟವನ್ನು ಪಡೆಯುವುದಕ್ಕೆ ಸಹಾಯ ಮಾಡುವಷ್ಟು ಸಶಕ್ತವಾಗಿದೆಯೇ ಎಂಬುದನ್ನು ಮೌಲ್ಯಮಾಪನ ಮಾಡಬೇಕು.

ಈ ಮೇಲೆ ಸೂಚಿಸಿದ ಅಂಶಗಳನ್ನು ಶೈಕ್ಷಣಿಕ ವರ್ಷದಲ್ಲಿ ಈ ನಾಲ್ಕು ಅಂಶಗಳ ಕಲಿಕಾ ನಿರ್ಧರಣೆಯ ಮೂಲಕ ಸಾಧಿಸಬಹುದು : 1) ಶೋಧನಾನಿರ್ಧರಣೆ 2) ಪ್ರಗತಿ ಮೇಲ್ವಿಚಾರಣಾ ನಿರ್ಧರಣೆ 3) ವಿಶ್ಲೇಷಣಾ ನಿರ್ಧರಣೆ 4) ಫಲಿತಾಂಶ ನಿರ್ಧರಣೆ. ಈ ನಾಲ್ಕು ಅಂಶಗಳು ಕೇವಲ ಸ್ಥೂಲವಾಗಿ ಮೇಲೆ ಹೇಳಿದ ಉದ್ದೇಶಗಳೊಂದಿಗೆ ಸಂವಾದಿಯಾಗಿವೆ. ಆದರೂ ಈ ನಾಲ್ಕೂ ಅಂಶಗಳು ಪರಿಣಾಮಕಾರಿ ಬೋಧನೆ ಮತ್ತು ಸಹಾಯ ಹಸ್ತವನ್ನು ಯೋಜಿಸಲು ನೆರವಾಗಬಲ್ಲವು.

**ಶೋಧನಾನಿರ್ಧರಣೆ:** ವಿದ್ಯಾರ್ಥಿಗಳು ಮುಂದೆ ಎಂಥ ಸಾಧನೆಯನ್ನು ತೋರಬಲ್ಲರು ಎಂಬುದನ್ನು ತಿಳಿಯಲು ಶೋಧನಾ ನಿರ್ಧರಣೆ ಅತ್ಯಂತ ಶೀಘ್ರವಾದ ಮತ್ತು ದಕ್ಷ ವಿಧಾನವಾಗಿದೆ. ಇದರಲ್ಲಿ ವಿದ್ಯಾರ್ಥಿಯ ಒಟ್ಟಾರೆ ಸಾಮರ್ಥ್ಯ ಮತ್ತು ಪ್ರಮುಖ ಕೌಶಲ್ಯಗಳನ್ನು ತಿಳಿಯಬಹುದು. ಆರಂಭದ ಹಂತದಲ್ಲೇ ಎಲ್ಲಾ ವಿದ್ಯಾರ್ಥಿಗಳ ಈ ನಿರ್ಧರಣೆಯನ್ನು ಮಾಡಿದರೆ, ಗ್ರೇಡ್ ಮಟ್ಟದ ನಿರೀಕ್ಷೆಗಳನ್ನು ತಲುಪದವರನ್ನು ಮತ್ತು ಅದನ್ನೂ ಮೀರಿ ಸಾಧನೆಯನ್ನು ತೋರುವವರನ್ನು ಸುಲಭವಾಗಿ ಪತ್ತೆ ಮಾಡಬಹುದು. ಇದರಲ್ಲಿ ಲಭ್ಯವಾದ ಫಲಿತಾಂಶವನ್ನು ಆರಂಭದ ಬೋಧನೆಯನ್ನು ಎಲ್ಲಿಂದ ಆರಂಭಿಸಬೇಕೆಂದು ನಿರ್ಧರಿಸಲು ಅಥವಾ ಇನ್ನೂ ಮೌಲ್ಯಮಾಪನ ನಡೆಸಬೇಕೇ ಎಂಬುದನ್ನು ನಿರ್ಧರಿಸಲು ಆಧಾರವಾಗಿ ಇಟ್ಟುಕೊಳ್ಳಬಹುದು.

**ಪ್ರಗತಿ ಮೇಲ್ವಿಚಾರಣೆ ನಿರ್ಧರಣೆ:** ಪ್ರಗತಿ ಮೇಲ್ವಿಚಾರಣೆ ನಿರ್ಧರಣೆ ಸಂಕ್ಷಿಪ್ತವಾಗಿರುತ್ತವೆ ವಿದ್ಯಾರ್ಥಿಗಳು ಸಾಕಷ್ಟು ಪ್ರಗತಿ ಸಾಧಿಸುತ್ತಿದ್ದಾರೆಯೇ ಎಂಬುದನ್ನು ಅರಿಯುವುದಕ್ಕೆ ನಿಯತಕಾಲಿಕವಾಗಿ ನಡೆಸುವ ಪ್ರಕ್ರಿಯೆ ಇದು. ಈ ಕೆಳಗಿನ ಉದ್ದೇಶಗಳಿಗೆ ಪ್ರಗತಿ ಮೇಲ್ವಿಚಾರಣೆಯ ದತ್ತಾಂಶಗಳನ್ನು ಸಂಗ್ರಹಿಸಿ, ಮೌಲ್ಯಮಾಪನ ಮಾಡಿ ಬಳಸುತ್ತಿರಬೇಕು. ಇದು ನಿರಂತರ ಪ್ರಕ್ರಿಯೆಯಾಗಿದ್ದು ಈ ಕೆಳಗಿನ ಉದ್ದೇಶಗಳಿಗಾಗಿ ಬಳಸಿಕೊಳ್ಳಲಾಗುತ್ತದೆ.

- ವಿದ್ಯಾರ್ಥಿಗಳ ಪ್ರಗತಿಯ ಮಟ್ಟವನ್ನು ಗುರುತಿಸುವುದು
- ಪರಿಣಾಮಕಾರಿ ಬೋಧನೆಯ ಮಾಹಿತಿಯನ್ನು ನೀಡುವುದು ಮತ್ತು ಅಗತ್ಯವಿದ್ದಲ್ಲಿ ಸಹಾಯ ಹಸ್ತದ ಸ್ವರೂಪವನ್ನು ತಿದ್ದುವುದು
- ಹೆಚ್ಚುವರಿ ಮಾಹಿತಿಯ ಅಗತ್ಯವನ್ನು ಗುರುತಿಸುವುದು.
- ಮಾನಕ ಮಟ್ಟ ಮತ್ತು ಸಾಧನೆಯ ಮಧ್ಯದ ಅಂತರವನ್ನು ವಿಶ್ಲೇಷಣೆ ನಡೆಸುವುದು.

**ನೈದಾನಿಕ ಕಲಿಕಾ ನಿರ್ಧರಣೆ:** ಇತರ ಪ್ರಕ್ರಿಯೆಗಳಿಗೆ ಹೋಲಿಸಿದರೆ ಸುದೀರ್ಘವಾಗಿರುವ ಈ ಪ್ರಕ್ರಿಯೆಯು

ನಿರ್ದಿಷ್ಟ ಕೌಶಲ್ಯಕ್ಕೆ ಸಂಬಂಧಿಸಿದಂತೆ ಆಳವಾದ ಮತ್ತು ವಿಶ್ವಾಸಾರ್ಹ ನಿರ್ಧರಣೆಯನ್ನು ಒದಗಿಸುತ್ತದೆ. ಹೆಚ್ಚು ಪರಿಣಾಮಕಾರಿಯಾದ ಬೋಧನಾ ಯೋಜನೆಗೆ ಮತ್ತು ಸಹಾಯಹಸ್ತ ನೀಡುವುದಕ್ಕೆ ಮಾಹಿತಿಗಳನ್ನು ನೀಡುವುದು ಈ ಪ್ರಕ್ರಿಯೆಯ ಪ್ರಮುಖ ಉದ್ದೇಶ. ಪ್ರಭಾವಶಾಲಿ ಬೋಧನಾ ಯೋಜನೆಯು ವಿದ್ಯಾರ್ಥಿಯ ಶೈಕ್ಷಣಿಕ ಮತ್ತು ವರ್ತನಾ ಕಲಿಕೆಗೆ ಹೊಸದಾದ ಮತ್ತು ಹೆಚ್ಚು ವಿಶ್ವಾಸಾರ್ಹ ಮಾಹಿತಿ ನೀಡುತ್ತದೆ ಎಂಬ ಸ್ಪಷ್ಟ ನಿರೀಕ್ಷೆ ಇದ್ದಾಗ ಈ ಸೈದ್ಧಾಂತಿಕ ನಿರ್ಧರಣೆಯನ್ನು ಕೈಗೊಳ್ಳಬೇಕು.

ವಿಶ್ವಾಸಾರ್ಹ ಮತ್ತು ಮಾನಕ ರೀತಿಯಲ್ಲಿ ಶಾಲೆಗಳು ತಪಾಸಣೆ, ಪ್ರಗತಿ ಮೇಲ್ವಿಚಾರಣೆ ಮತ್ತು ಫಲಿತಾಂಶ ವಿಶ್ಲೇಷಣೆಯನ್ನು ನಡೆಸಿದರೆ, ಹೆಚ್ಚುವರಿ ಪರೀಕ್ಷೆ, ಔಪಚಾರಿಕ ವಿಶ್ಲೇಷಣಾ ಕ್ರಮಗಳನ್ನು ಕಡಿಮೆಗೊಳಿಸಬಹುದು. ಯಾಕೆಂದರೆ ಇಂಥ ಪ್ರಕ್ರಿಯೆಗಳು ಹೆಚ್ಚು ಸಮಯ ಬೇಡುವಂಥವು ಮತ್ತು ವೆಚ್ಚದಾಯಕವಾಗಿರುತ್ತವೆ. ಇತರ ವಿಶ್ಲೇಷಣೆಗಳಿಗಿಂತಲೂ ಕಡಿಮೆ ಪ್ರಮಾಣದಲ್ಲಿ ಮತ್ತು ಅಪರೂಪಕ್ಕೊಮ್ಮೆ ಮಾತ್ರ ಸಂಪೂರ್ಣ ವಿಶ್ಲೇಷಣಾ ಪರೀಕ್ಷೆಗಳನ್ನು ನಡೆಸಬೇಕು. ಆದಾಗ್ಯೂ, ತಪಾಸಣೆ, ಪ್ರಗತಿ ಮೇಲ್ವಿಚಾರಣೆ ಹಾಗೂ ಫಲಿತಾಂಶ ವಿಶ್ಲೇಷಣೆಯಿಂದ ಸಾಧ್ಯವಾಗದ ವಿದ್ಯಾರ್ಥಿಗಳ ವಿಶ್ಲೇಷಣೆಯನ್ನು ನಿರ್ದಿಷ್ಟ ಉಪ ಪರೀಕ್ಷೆಗಳ ಮೂಲಕ ನಡೆಸಬಹುದು. ಇಂಥ ಪರೀಕ್ಷೆಗಳಿಗೆ ತೆಗೆದುಕೊಳ್ಳಲಾದ ಸಮಯದ ಮಾಹಿತಿಯ ಬಗ್ಗೆ ಮತ್ತು ಇಂಥ ವಿಶ್ಲೇಷಣಾ ಪರೀಕ್ಷೆಗಳಿಂದ ಶಿಕ್ಷಕರಿಗೆ ನೀಡಲಾದ ಮಾಹಿತಿಯ ಮೌಲ್ಯದ ಬಗ್ಗೆ ಶಾಲಾ ಮುಖ್ಯಸ್ಥರು ನಿರಂತರವಾಗಿ ವಿಚಾರಣೆ ನಡೆಸುತ್ತಿರಬೇಕು.

**ಫಲಿತಾಂಶ ನಿರ್ಧರಣೆ:** ಶೈಕ್ಷಣಿಕ ವರ್ಷದ ಅಂತ್ಯದಲ್ಲಿ ಈ ಮಾಹಿತಿಯನ್ನು ನೀಡಲಾಗುತ್ತದೆ. ಪ್ರಮುಖ ಫಲಿತಾಂಶಗಳು (ಉದಾ., ಸಿಎಸ್‌ಎಪಿ) ಸಾಮಾನ್ಯವಾಗಿ ಸಮೂಹ ನಿರ್ದೇಶಿತ ಪರೀಕ್ಷೆಗಳಿಂದ ಪಡೆದಂಥವಾಗಿರುತ್ತವೆ. ಫಲಿತಾಂಶ ವಿಶ್ಲೇಷಣೆಗಳು ಶಾಲೆ, ಜಿಲ್ಲೆ ಮತ್ತು ರಾಜ್ಯ ಮಟ್ಟದ ವರದಿಯ ಉದ್ದೇಶವನ್ನೂ ಹೊಂದಿರುತ್ತವೆ. ಈ ಪರೀಕ್ಷೆಗಳು ಬಹು ಮುಖ್ಯ ಏಕೆಂದರೆ ಇವು ಶಾಲೆ ಮುಖ್ಯಸ್ಥರು ಮತ್ತು ಶಿಕ್ಷಕರಿಗೆ ಬೋಧನಾ ಕಾರ್ಯಕ್ರಮದ ಒಟ್ಟಾರೆ ಪರಿಣಾಮದ ಬಗ್ಗೆ ಹಿಮ್ಮಾಹಿತಿಯನ್ನು ನೀಡುತ್ತವೆ. ಪರಿಣಾಮಕಾರಿ ವಿಶ್ಲೇಷಣಾ ಯೋಜನೆಯ ಅಡಿಯಲ್ಲಿ, ಪ್ರತಿ ಶೈಕ್ಷಣಿಕ ವರ್ಷದ ಕೊನೆಯಲ್ಲಿ ಫಲಿತಾಂಶ ವಿಶ್ಲೇಷಣೆಯನ್ನು ನಡೆಸಬೇಕು.

**ಈಗಿರುವ ಕಲಿಕಾ ನಿರ್ಧರಣೆ**

ದೇಶದಲ್ಲಿನ ಶಾಲಾ ಶಿಕ್ಷಣದಲ್ಲಿನ ಪ್ರಸ್ತುತ ಕಲಿಕಾನಿರ್ಧರಣೆ ಮತ್ತು ಮೌಲ್ಯಮಾಪನ ವ್ಯವಸ್ಥೆಯು ಸಂಪೂರ್ಣವಾಗಿ ಪರೀಕ್ಷೆಯನ್ನು ಆಧರಿಸಿದೆ. ಹೀಗಾಗಿ, ಕೇವಲ ಜ್ಞಾನಗ್ರಹಣದ ಕಲಿಕೆಯ ಫಲಿತಾಂಶವನ್ನೇ ಅವಲಂಬಿಸಿದೆ. ಮಗುವಿನ ಬೆಳವಣಿಗೆಯಲ್ಲಿ ಪಠ್ಯೇತರ ಚಟುವಟಿಕೆಗಳು ಅತ್ಯಂತ ಪ್ರಮುಖ ಅಂಶ ಹಾಗೂ ಪಠ್ಯ ಚಟುವಟಿಕೆಗೆ ಸಮಾನ ಅಂಶವನ್ನು ಹೊಂದಿದ್ದರೂ ಪಠ್ಯೇತರ ಪ್ರಕ್ರಿಯೆಗಳು ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟಿವೆ. ಪಠ್ಯ ಚಟುವಟಿಕೆಗಳಲ್ಲೂ ಕೇವಲ ಕಲಿಕೆ ಮತ್ತು ಗ್ರಹಣ ಹಾಗೂ ವರ್ಗೀಕರಣಕ್ಕೇ ಹೆಚ್ಚಿನ ಮಹತ್ವ ನೀಡಲಾಗಿದೆ. ಉನ್ನತ ಮಾನಸಿಕ ಸಾಮರ್ಥ್ಯಗಳಾದ ಸೂಕ್ಷ್ಮ ಚಿಂತನೆ, ಸಮಸ್ಯೆ ಪರಿಹಾರ ಮತ್ತು ಸೃಜನಾತ್ಮಕ ಸಾಮರ್ಥ್ಯವನ್ನು ಕಡೆಗಣಿಸಲಾಗಿದೆ.

ದೇಶದಲ್ಲಿ 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನುಶಾಲಾ ಶಿಕ್ಷಣದಲ್ಲಿನ ಪ್ರತಿಯೊಂದು ಅಂಶವನ್ನೂ ವಿಶ್ಲೇಷಿಸಿರುವ 21 ಪರಿಸ್ಥಿತಿ ಅಧ್ಯಯನ ಲೇಖನಗಳ ಆಧಾರದ ಮೇಲೆ ರಚಿಸಲಾಗಿದೆ.. ಮೌಲ್ಯಮಾಪನ ಮತ್ತು ವಿಶ್ಲೇಷಣೆಯನ್ನು ಗಮನದಲ್ಲಿಟ್ಟುಕೊಂಡರೆ ಪರೀಕ್ಷಾ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆ ಅಗತ್ಯವಿದೆ ಎಂದು ಈ ದಾಖಲೆ ಹೇಳುತ್ತದೆ. ಪ್ರಸ್ತುತ ಪರೀಕ್ಷಾ ಕೇಂದ್ರಿತವಾಗಿರುವ ಭಾರತೀಯ ಶಿಕ್ಷಣ ವ್ಯವಸ್ಥೆಯಲ್ಲಿ ಗರಿಷ್ಠ ನಪಾಸುದರ, ಮತ್ತು ಮಧ್ಯಂತರದಲ್ಲಿ ಶಾಲೆ ಬಿಡುವವರ ಸಂಖ್ಯೆಯಲ್ಲಿನ ಹೆಚ್ಚಳ, ಅನಾರೋಗ್ಯಕರ ಸ್ಪರ್ಧೆ, ಒತ್ತಡ, ನರದೌರ್ಬಲ್ಯ ಮತ್ತು ಆತ್ಮಹತ್ಯೆಯಂಥ ಸಮಸ್ಯೆಗಳು ಭಾರತೀಯ ಶಿಕ್ಷಣ ತಜ್ಞರು ಪರೀಕ್ಷಾ ಕೇಂದ್ರಿತವಾಗಿರುವ ಮೌಲ್ಯಮಾಪನ ವ್ಯವಸ್ಥೆಯ ಸುಧಾರಣೆಯತ್ತ ಗಮನ ಹರಿಸಲೇಬೇಕು ಎಂದು ಒತ್ತಾಯಿಸುತ್ತದೆ.

ನಮ್ಮ ಯುವ ವಿದ್ಯಾರ್ಥಿಗಳನ್ನು ನಾವು ಕೇವಲ ಪಾಠ ಕಲಿಯುವವರನ್ನಾಗಿ ಬೆಳೆಸುವ ಅಗತ್ಯವಿಲ್ಲ. ಬದಲಿಗೆ ಸಮಸ್ಯೆ ಪರಿಹಾರದಲ್ಲಿ ಕ್ರಿಯಾಶೀಲರನ್ನಾಗಿಸಬೇಕಿದೆ. ಆದರೆ ಪ್ರಸ್ತುತ ಪರೀಕ್ಷಾ ವ್ಯವಸ್ಥೆಯು ಸುಲಭ ನಮ್ಯವಾದದ್ದಲ್ಲ. ಇದು ಒಂದು ರೀತಿಯಲ್ಲಿ 'ತಲೆಗೆಲ್ಲಾ ಒಂದೇ ಮಂತ್ರ' ಎಂಬ ಸಿದ್ಧಾಂತವನ್ನುಳ್ಳದ್ದು. ಇಲ್ಲಿ ಪ್ರತಿ ವ್ಯಕ್ತಿಯ ಪ್ರತ್ಯೇಕತೆ ಮತ್ತು ಸೃಜನಶೀಲತೆ ಸಂಪೂರ್ಣ ಗೌಣವಾಗಿದೆ. ವಿದ್ಯಾರ್ಥಿಗಳ ನೈಜ ಸಂಭಾವ್ಯತೆಯನ್ನು ಅಳೆಯುವಲ್ಲಿ ಇದು ಸಂಪೂರ್ಣವಾಗಿ ವಿಫಲವಾಗಿದೆ. ಅಷ್ಟೇ ಅಲ್ಲ, ವಿದ್ಯಾರ್ಥಿಗಳಿಗೆ ನೀಡುವ ಅಂಕಗಳಂತೂ ಸಂಪೂರ್ಣ ಕಚ್ಚಾ ರೂಪದ್ದು. ಅವರ ನೈಜ ಕಲಿಕೆ ಸಾಮರ್ಥ್ಯವನ್ನು ಇವು ಬಿಂಬಿಸುವುದೇ ಇಲ್ಲ. ಬೋರ್ಡ್ ಪರೀಕ್ಷೆಗಳು ಎಂಬ ಪರೀಕ್ಷಾ ವಿಧಾನವನ್ನು ಪ್ರಸ್ತುತ ಶಾಲೆಗಳಲ್ಲಿ ಅನುಸರಿಸಲಾಗುತ್ತದೆ. ಇವು ಶಿಕ್ಷಣದ ಸಂಪೂರ್ಣ ಉದ್ದೇಶವನ್ನೇ ಬುಡಮೇಲು ಮಾಡುತ್ತವೆ.

ಈ ಅಸ್ಪಷ್ಟತೆಯನ್ನು ಸರಿಪಡಿಸಲು 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನಲ್ಲಿ ಶಾಲಾ ಶಿಕ್ಷಣಕ್ಕೆ ಕೆಲವು ಸಿದ್ಧಾಂತಗಳನ್ನು ಪ್ರಸ್ತಾಪಿಸಲಾಗಿದೆ. ಅವುಗಳೆಂದರೆ,

- ಶಾಲೆಯ ಹೊರಗಿನ ಜೀವನಕ್ಕೂ ಶಿಕ್ಷಣಕ್ಕೂ ಸಂಬಂಧಕಲ್ಪಿಸುವುದು
- ಕಲಿಕೆಯು ಸಾಂಪ್ರದಾಯಿಕ ಉರು ಹೊಡೆಯುವ ವಿಧಾನದಿಂದ ಭಿನ್ನವಾಗಿರುವಂತೆ ನೋಡಿಕೊಳ್ಳುವುದು
- ಪಠ್ಯಪುಸ್ತಕ ಕೇಂದ್ರಿತ ಕಲಿಕೆಯಲ್ಲೇ ಇರುವುದರ ಬದಲು ಮಕ್ಕಳ ಒಟ್ಟಾರೆ ಅಭಿವೃದ್ಧಿಯನ್ನು ಒದಗಿಸುವ ಅಂಶಗಳನ್ನು ಪಠ್ಯಕ್ರಮದಲ್ಲಿ ನೀಡುವುದು
- ತರಗತಿಯ ಪಾಠ ಬೋಧನೆಯಲ್ಲೇ ಪರೀಕ್ಷೆಗಳನ್ನು ಅಂಗಭಾಗವಾಗಿಸುವುದು ಮತ್ತು ಹೆಚ್ಚು ನಮ್ಯವಾಗಿಸುವುದು
- ದೇಶದ ಪ್ರಜಾಪ್ರಭುತ್ವ ಸಿದ್ಧಾಂತಗಳ ಕಾಳಜಿಗೆ ಅನುಗುಣವಾಗಿ ಮಕ್ಕಳಲ್ಲಿ ಹಿರಿಮೆಯ ವ್ಯಕ್ತಿತ್ವವನ್ನು ಮೂಡಿಸುವುದು

ಸಾಂಪ್ರದಾಯಿಕ ವಿಧಾನಕ್ಕೆ ಹೋಲಿಸಿದರೆ ಈ ನಿರ್ದೇಶನಾತ್ಮಕ ಸಿದ್ಧಾಂತಗಳು ಕಲಿಕೆ ಮತ್ತು ಶಿಕ್ಷಣದಲ್ಲಿ ಉತ್ತಮ ಬದಲಾವಣೆಯ ಉದ್ದೇಶವನ್ನು ಹೊಂದಿವೆ. ವರ್ತನಾ ವಿಧಾನದಿಂದ ಸಂರಚನಾತ್ಮಕ ವಿಧಾನದೆಡೆಗೆ ಇಲ್ಲಿ ಪರಿವರ್ತನೆಯ ಸೂಚನೆಯಿದೆ. ಇಲ್ಲಿನ ಹೊಸ ವಿಧಾನವು ವಿದ್ಯಾರ್ಥಿ ಕೇಂದ್ರಿತವಾಗಿದೆ ಮತ್ತು ವಿಶ್ಲೇಷಣೆಯ ಪ್ರಕ್ರಿಯೆ ಕೂಡಾ ಕಲಿಯುವವರ ಕಲಿಕಾ ಸಾಮರ್ಥ್ಯವನ್ನು, ಅವರ ಒಟ್ಟಾರೆ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ಬೆಳೆಸುವುದಾಗಿದೆ. ಕಲಿಕಾ ವಿಧಾನದಲ್ಲಿನ ಈ ಬದಲಾವಣೆಯು ವಿಶ್ಲೇಷಣಾ ಸಾಧನಗಳು ಮತ್ತು ತಂತ್ರದಲ್ಲಿ ಆಮೂಲಾಗ್ರ ಬದಲಾವಣೆಯನ್ನು ಬೇಡುತ್ತವೆ.

ಈ ಹಿಂದಿನ ಕಲಿಕೆ ಮತ್ತು ಶಿಕ್ಷಣದಲ್ಲಿನ ವರ್ತನಾ ಕೇಂದ್ರಿತ ವಿಧಾನದಿಂದ ಸಂರಚನಾ ವಿಧಾನದತ್ತ ಸಂಪೂರ್ಣ ಬದಲಾವಣೆಯ ಉದ್ದೇಶವನ್ನು 2005ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಹೊಂದಿದೆ. ವರ್ತನಾ ಕೇಂದ್ರಿತ ವಿಧಾನವು ವಿದ್ಯಾರ್ಥಿಗಳ ಸಾಧನೆಯನ್ನು ಅವರ ನೆನಪಿನಶಕ್ತಿಯ ಆಧಾರದಲ್ಲಿ ವಿಶ್ಲೇಷಣೆ ಮಾಡುತ್ತದೆ. ಇಲ್ಲಿ ಕಾರಣ ಹುಡುಕುವ ಸಾಮರ್ಥ್ಯ ಮತ್ತು ಸಮಸ್ಯೆ ಪರಿಹಾರ ಸಾಮರ್ಥ್ಯವನ್ನು ಸಂಪೂರ್ಣವಾಗಿ ನಿರ್ಲಕ್ಷಿಸಲಾಗಿದೆ.

ಇನ್ನೊಂದೆಡೆ ಸಂರಚನಾ ವಿಧಾನದಲ್ಲಿ ಕಲಿಕೆಯು ನಿರಂತರ ಪ್ರಕ್ರಿಯೆ. ಇಲ್ಲಿ ಅನುಭವದ ಆಧಾರದ ಮೇಲೆ ಕಲಿಕೆ ಪರಿಧಿಯು ವಿಸ್ತಾರಗೊಳ್ಳುತ್ತದೆ. ಈ ಕಲಿಕೆಯು ನೈಜ ಸನ್ನಿವೇಶಗಳನ್ನು ಆಧರಿಸಿರುತ್ತದೆ. ಇದು ಸಾಮಾಜಿಕ ಸಂವಹನವನ್ನು ಒಳಗೊಂಡಿರುತ್ತದೆ ಮತ್ತು ಇಲ್ಲಿ ಅಧಿಕೃತ ಕಲಿಕಾ ಸಾಧನಗಳನ್ನು ಬಳಸಲಾಗುತ್ತದೆ. ಸಂರಚನಾ ವಿಧಾನದಲ್ಲಿ ಕಲಿಕಾ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಲಾಗುತ್ತದೆ. ಪ್ರಶ್ನೆ ಕೇಳಲು ಪ್ರೋತ್ಸಾಹಿಸಲಾಗುತ್ತದೆ, ಮುಕ್ತವಾಗಿ ಸಂಭಾಷಣೆ ನಡೆಸಿ ಚಿಂತನಾ ಶಕ್ತಿಯನ್ನು ವರ್ಧಿಸಿಕೊಳ್ಳಲು ಅವಕಾಶ ನೀಡಲಾಗುತ್ತದೆ. ಇದರಿಂದ ವಿದ್ಯಾರ್ಥಿಗಳಲ್ಲಿ ವಿಚಾರಶೀಲತೆ ಮತ್ತು ಸಮಸ್ಯೆ ಪರಿಹಾರದ ಧೋರಣೆ ಬೆಳೆಯುತ್ತದೆ. ಈ ವಿಧಾನದಲ್ಲಿ ವಿದ್ಯಾರ್ಥಿಗಳಿಗೆ ಮುಕ್ತವಾದ ಮತ್ತು ಪಠ್ಯೇತರ ಪ್ರಶ್ನೆಗಳನ್ನು ಕೇಳಲಾಗುತ್ತದೆ ಮತ್ತು ಅವರ ವಿಚಾರಗಳಿಗೆ ಸೂಕ್ತ ಮನ್ನಣೆ ನೀಡಲಾಗುತ್ತದೆ.

ಸಮೂಹದಲ್ಲಿ ಜತೆಗೂಡಿ ಕಾರ್ಯನಿರ್ವಹಣೆಗೆ ಪ್ರೋತ್ಸಾಹಿಸಲಾಗುತ್ತದೆ. ಇಲ್ಲಿ ಕಲ್ಪನೆಗಳನ್ನು ಹಂಚಿಕೊಳ್ಳುವುದರಿಂದ ಕಲ್ಪನಾ ಸ್ಪಷ್ಟತೆ ಮೂಡುತ್ತದೆ ಮತ್ತು ಭಾಷಾ ಕಲಿಕೆಯಲ್ಲಿ ಬೆಳವಣಿಗೆ ಸಾಧಿಸುವುದು ಸಾಧ್ಯವಾಗುತ್ತದೆ. ಪ್ರತಿ ವ್ಯಕ್ತಿಯೂ ಸ್ವಂತ ತಿಳುವಳಿಕೆಯನ್ನು ರೂಪಿಸಿಕೊಳ್ಳುವುದು ಮತ್ತು ಇಂತಹ ತಿಳುವಳಿಕೆಯನ್ನು ರೂಪಿಸಿಕೊಳ್ಳಲು ಸರಿಯಾದ ಅವಕಾಶ ಮತ್ತು ವಾತಾವರಣವನ್ನು ಕಲ್ಪಿಸುವುದು ರಚನಾತ್ಮಕ ವಿಧಾನದ ಮೂಲ ಉದ್ದೇಶ. ಶಿಕ್ಷಣದಲ್ಲಿನ ಈ ಹೊಸ ನಿಲುವು ಶಾಲೆಯ ಕಲಿಕಾ ನಿರ್ಧರಣೆಯಲ್ಲೂ ಮಹತ್ತರ ಬದಲಾವಣೆಯನ್ನು ಬಯಸುತ್ತದೆ.

**ಗ್ರಂಥಋಣ**

*Alderson, J. C. (2000). Assessing Reading. Cambridge: Cambridge University Press, 203*

*Assessment Reform Groups.(1999). Beyond the Black Box. Cambridge: University of Cambridge School of Education.*

*(http://english.unitecnology.ac.nz/resources/units/assessment.html)*

*Chater, Pauline. (1984). Marking and assessment in English. London: Routledge, 3*

*Hamp-Lyons, L. and Condon, W. (2000).Assessing the portfolio: Principles for practice theory and research. Cresskill, NJ: Hampton Press, 32-33.*



***ಶಂಕರ್*** *ಅವರು ಪ್ರಸ್ತುತ ಬಿಹಾರದ ಬೇಗುಸರಜ್, ಶಹಾಪುರದಲ್ಲಿ ಜಿಲ್ಲಾ ಶೈಕ್ಷಣಿಕ ಮತ್ತು ತರಬೇತಿ ಸಂಸ್ಥೆಯ ಪ್ರಿನ್ಸಿಪಾಲ್ ಆಗಿದ್ದಾರೆ. ಶಿಕ್ಷಣ ಮತ್ತು ಕಲಿಕೆ ಪ್ರಕ್ರಿಯೆಯಲ್ಲಿ ತೀವ್ರ ಆಸಕ್ತಿ ಹೊಂದಿರುವ ಇವರು, ಕಳೆದ 25 ವರ್ಷಗಳಿಂದಲೂ ಶಿಕ್ಷಕರ ತರಬೇತುದಾರರಾಗಿ ಕೆಲಸ ಮಾಡುತ್ತಿದ್ದಾರೆ. ಇವರನ್ನು* g_shankar_2007@yahoo.co.in *ನಲ್ಲಿ ಸಂಪರ್ಕಿಸಬಹುದು*



# ಶಾಲಾ ಶಿಕ್ಷಣದಲ್ಲಿ ಕಲಿಕಾನಿರ್ಧರಣೆ : ಅಂದು–ಇಂದು

ಪ್ರೇಮ್ ಲತಾ ಭಟ್



ಕಲಿಕಾನಿರ್ಧರಣೆಯು ಮಕ್ಕಳ ಶೈಕ್ಷಣಿಕ ಜೀವನದಲ್ಲಿ ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಮಕ್ಕಳು ಯಾವುದಾದರೂ ಅಸಮರ್ಥತೆಯನ್ನು ಹೊಂದಿದ್ದಾರೆಯೇ ಮತ್ತು ಅವರಿಗೆ ವಿಶೇಷ ಶಿಕ್ಷಣ ಮತ್ತು ಇದಕ್ಕೆ ಸಂಬಂಧಿಸಿದಂತಹ ಏನಾದರೂ ಸಹಾಯ ಅಗತ್ಯವಿದೆಯೇ ಎಂಬುದನ್ನು ನಿರ್ಧರಿಸಲು ಇದರ ಅಗತ್ಯವಿದೆ. ಮಕ್ಕಳ ಕಲಿಕೆಗೆ ಸಹಾಯಕವಾಗುವಂತೆ ಶೈಕ್ಷಣಿಕ ಕಾರ್ಯಕ್ರಮವನ್ನು ರೂಪಿಸಲು ಇದು ಮೊದಲ ಹೆಜ್ಜೆಯಾಗಿದೆ. ಅಸಮರ್ಥತೆಯಿರುವ ಮಕ್ಕಳಿಗೆ ಯಾವುದೇ ರೀತಿಯ ವಿಶೇಷ ಶಿಕ್ಷಣವನ್ನು ನೀಡುವ ಮೊದಲು ಸಂಪೂರ್ಣವಾದ ಮತ್ತು ವೈಯಕ್ತಿಕವಾದ ಪ್ರಾರಂಭಿಕ ಕಲಿಕಾನಿರ್ಧರಣೆಯನ್ನು ಮಾಡಬೇಕು. ವಿದ್ಯಾರ್ಥಿಗಳ ಮರುಕಲಿಕಾನಿರ್ಧರಣೆಯನ್ನು ಕನಿಷ್ಠ ಮೂರು ವರ್ಷಕ್ಕೊಮ್ಮೆಯಾದರೂ ಮಾಡಬೇಕು.

ವಾಸ್ತವವಾಗಿ ಕಲಿಕಾನಿರ್ಧರಣೆಯಲ್ಲಿ ವಿದ್ಯಾರ್ಥಿಯು ಅಸಮರ್ಥತೆಯನ್ನು ಹೊಂದಿದ್ದಾನೆ ಎಂದುಕೊಂಡಿರುವ ಅಂಶಗಳ ಬಗ್ಗೆ ಅವನ ಚಟುವಟಿಕೆ ಮತ್ತು ಬೆಳವಣಿಗೆಯನ್ನು ಕುರಿತು ವಿವಿಧ ಮೂಲಗಳಿಂದ ಹಾಗೂ ಅವನ ನೀಡಿದ ಮಾಹಿತಿಯನ್ನೂ ಸೇರಿಸಿ ಒಟ್ಟಾರೆ ಮಾಹಿತಿಯನ್ನು ಕಲೆಹಾಕಬೇಕಾಗುತ್ತದೆ. ಈ ಕಲಿಕಾನಿರ್ಧರಣೆಯು ವಿದ್ಯಾರ್ಥಿಯ ವಿಷಯಗ್ರಹಣೆ, ವರ್ತನೆ, ದೈಹಿಕ ಮತ್ತು ಬೆಳವಣಿಗೆ ಅಂಶಗಳು ಹಾಗೂ ಇನ್ನಿತರ ಅಂಶಗಳನ್ನು ಗಮನಿಸುತ್ತದೆ. ಈ ಎಲ್ಲ ಮಾಹಿತಿಗಳನ್ನು ವಿದ್ಯಾರ್ಥಿಯ ಶೈಕ್ಷಣಿಕ ಅಗತ್ಯತೆಯನ್ನು ನಿರ್ಧರಿಸಲು ಬಳಸಲಾಗುತ್ತದೆ.

ಶಾಲೆಗಳಲ್ಲಿನ ಪರಿಪೂರ್ಣವಾದ ಮತ್ತು ವೈಯಕ್ತಿಕವಾದ ಕಲಿಕಾನಿರ್ಧರಣೆಯು ಹಲವಾರು ಮುಖ್ಯ ಉದ್ದೇಶಗಳನ್ನು ಪೂರೈಸುತ್ತದೆ ಅವುಗಳೆಂದರೆ:

1. **ಗುರುತಿಸುವಿಕೆ**: ಶಾಲಾ ಶಿಕ್ಷಣದ ಕಲಿಕಾನಿರ್ಧರಣೆಯು ಯಾರು ಕಲಿಕೆಯಲ್ಲಿ ಹಿಂದುಳಿದಿದ್ದಾರೆ ಅಥವಾ ಕಲಿಕೆಯ ಸಮಸ್ಯೆಯನ್ನು ಹೊಂದಿದ್ದಾರೆ ಮತ್ತು ಯಾರಿಗೆ ವಿಶೇಷ ಶಿಕ್ಷಣದ ಹಾಗೂ ಸಂಬಂಧಿತ ಸೇವೆಗಳ ಆವಶ್ಯಕತೆ ಇದೆ ಎಂಬುದನ್ನು ಗುರುತಿಸುತ್ತದೆ. ಅಲ್ಲದೆ ಇದು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಅವರ ಅಭಿವೃದ್ಧಿಗೆ ಹಾಗೂ ಉತ್ತಮ ಭವಿಷ್ಯಕ್ಕೆ ಅಗತ್ಯವಿರುವ ವಿಶೇಷವಾದ ದೃಷ್ಟಿಕೋನವನ್ನು ನೀಡುತ್ತದೆ. ವಿದ್ಯಾರ್ಥಿಗಳು ಶಾಲಾ ಸಮಯದಲ್ಲಿ ತಮ್ಮ ಸಾಧನೆಯ ಆಧಾರದ ಮೇಲೆ ತಮ್ಮ ಸಾಮರ್ಥ್ಯವನ್ನು ತಿಳಿದುಕೊಳ್ಳಬಹುದಾಗಿದೆ.

2. **ಅರ್ಹತೆ**: ಈ ಕಲಿಕಾನಿರ್ಧರಣೆಯು ನಿಮ್ಮ ಮಗುವು ಅಸಮರ್ಥತೆ ಹೊಂದಿರುವ ವ್ಯಕ್ತಿಗಳ ಶಿಕ್ಷಣ ಕಾಯ್ದೆ (ಐಡಿಇಎ) ಯಲ್ಲಿ ಹೇಳಿರುವ ಅಸಮರ್ಥತೆಯನ್ನು ನಿಜಕ್ಕೂ ಹೊಂದಿದೆಯೆ ಮತ್ತು ವಿಶೇಷ ಶಿಕ್ಷಣ ಮತ್ತು ಅದಕ್ಕೆ ಸಂಬಂಧಿಸಿದ ಸೇವೆಗಳಿಗೆ ಅರ್ಹವಾಗಿದೆಯೆ ಎಂಬುದನ್ನು ನಿರ್ಧರಿಸುತ್ತದೆ.

3. **ವ್ಯಕ್ತಿಗತವಾದ ಶೈಕ್ಷಣಿಕ ಕಾರ್ಯಕ್ರಮದ ಯೋಜನೆ (ಐಇಪಿ)**: ಮಕ್ಕಳಿಗೆ ಸೂಕ್ತವಾದ ಐಇಪಿಯನ್ನು ರೂಪಿಸಲು ಶಾಲಾ ಕಲಿಕಾನಿರ್ಧರಣೆಯು ಅಗತ್ಯ ಮಾಹಿತಿಯನ್ನು ಒದಗಿಸಿ ಸಹಾಯ ಮಾಡುತ್ತದೆ.

4. **ಬೋಧನಾ ತಂತ್ರಗಳು**: ಮಗುವಿನ ಕಲಿಕೆಗೆ ಯಾವ ತಂತ್ರವು ಹೆಚ್ಚು ಪರಿಣಾಮಕಾರಿ ಎಂಬುದನ್ನು ನಿರ್ಧರಿಸಲು ಕಲಿಕಾನಿರ್ಧರಣೆಯು ಸಹಾಯ ಮಾಡುತ್ತದೆ.

5. **ಪ್ರಗತಿಯನ್ನು ಅಳೆಯುವುದು**: ನಿಮ್ಮ ಮಗುವಿನ ಶೈಕ್ಷಣಿಕ ಪ್ರಗತಿಯನ್ನು ಅಳೆಯಲು ಒಂದು ಆಧಾರ ರೇಖೆಯನ್ನು ಶಾಲಾ ಕಲಿಕಾನಿರ್ಧರಣೆಯು ಸ್ಥಾಪಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ಶಾಲೆಗಳಲ್ಲಿನ ಕಲಿಕಾನಿರ್ಧರಣೆಯ ವ್ಯವಸ್ಥೆಯು ಎನ್‌ಸಿಎಫ್–2005, ಶಿಕ್ಷಣದ ಹಕ್ಕು ಕಾಯ್ದೆ, ನಿರಂತರ ಮತ್ತು ಸಮಗ್ರ ಮೌಲ್ಯಮಾಪನದ ಶಿಫಾರಸ್ಸಿನಂತೆ ಬದಲಾವಣೆಯನ್ನು ಹೊಂದುತ್ತಿದೆ. ಶಾಲೆಗಳಲ್ಲಿನ ಕಲಿಕಾನಿರ್ಧರಣೆಯ ಪ್ರಕ್ರಿಯೆಯು ಮಕ್ಕಳಿಗೆ ಸೂಕ್ತವಾದ ಶಿಕ್ಷಣ ಕ್ರಮವನ್ನು ಅಭಿವೃದ್ಧಿ ಪಡಿಸಲು ಸೂಕ್ತವಾದ ಅಡಿಪಾಯವನ್ನು ಹಾಕಿಕೊಡುತ್ತದೆ. ನಾವು ಸಾಂಪ್ರದಾಯಿಕ ಮೌಲ್ಯಮಾಪನ ವ್ಯವಸ್ಥೆಯನ್ನು ಕಲ್ಪಿಸಿಕೊಂಡಾಗ ಅದು ನೈಜವಾದ ಕಲಿಕೆಯನ್ನು ಅಷ್ಟೊಂದು ಪರಿಣಾಮಕಾರಿಯಾಗಿ ನಿರ್ವಹಿಸುವುದಿಲ್ಲ. ಅಲ್ಲದೆ ಇದರಲ್ಲಿ